**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 5784/2023 ಸಿ.ಡಬ್ಲ್ಯೂ.6 ಪಿ.ಡಬ್ಲ್ಯೂ.7

| | |
|---|---|
| ಹೆಸರು | ಡಾ. ಶರಣಬಸವ |
| ತಂದೆ | ಬಸವರಾಜ |
| ವಯಸ್ಸು | 53 ವರ್ಷ |
| ಉದ್ಯೋಗ | ವೈದ್ಯಾಧಿಕಾರಿಗಳು ಜಿಮ್ಸ ಆಸ್ಪತ್ರೆ ಕಲಬುರಗಿ |
| ವಾಸಸ್ಥಳ | ಕಲಬುರಗಿ |

ದಿನಾಂಕ 12-02-2026

ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ಸೆಪ್ಟಂಬರ 2016 ರಿಂದ ಇಲ್ಲಿಯವರೆಗೆ ಜಿಮ್ಸ ಆಸ್ಪತ್ರೆ ಕಲಬುರಗಿಯಲ್ಲಿ ವೈದ್ಯಾಧಿಕಾರಿ ಅಂತಾ ಕೆಲಸ ಮಾಡುತ್ತಿದ್ದೇನೆ.

ದಿಃ 05-08-2023 ಬೆಳಿಗ್ಗೆ ಸುಮಾರು 10.40 ಗಂಟೆಗೆ ಚಾಸಾ 1 ರವರು ಹಲ್ಲೆಯ ಹಿನ್ನಲೆ ಮೇಲೆ ಆಸ್ಪತ್ರೆಗೆ ಬಂದಿದ್ದರು. ಸದರಿ ಅವರನ್ನು ಪರೀಕ್ಷಿಸಿ ನೋಡಿದಾಗ ಅವರಿಗೆ ಈ ಕೆಳಕಂಡಂತೆ ಗಾಯಗಳು ಕಂಡು ಬಂದಿರುತ್ತವೆ.

1. ಎದೆಯ ಮೇಲೆ ಒಳಪೆಟ್ಟು ಮುಟ್ಟಿ ನೋಡಿದಾಗ ನೋವು ಇತ್ತು.
2. ಬಲಗೈ ಮುಂಗೈ ಮೇಲೆ ಒಳಪೆಟ್ಟು ಇದ್ದು ಮುಟ್ಟಿ ನೋಡಿದಾಗ ನೋವು ಇತ್ತು.
3. ಬೆನ್ನಿನ ಹಿಂಭಾಗದಲ್ಲಿ ಒಳಪೆಟ್ಟು ಇದ್ದು ಮುಟ್ಟಿ ನೋಡಿದಾಗ ನೋವು ಇತ್ತು.

ಸದರಿ ಚಾಸಾ 1 ರವರನ್ನು ಎರಡು ದಿನ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಂಡು ಎದೆಯ ಎಕ್ಸರೆ ಮತ್ತು ಹೊಟ್ಟೆಯ ಅಲ್ಟ್ರಾಸೌಂಡ ಸ್ಕ್ಯಾನ ಮಾಡಿ ನೋಡಲಾಗಿ ಎಲ್ಲವೂ ಸರಿಯಾಗಿ ಇತ್ತು. ನನ್ನ ಪ್ರಕಾರ 1 ರಿಂದ 3 ನೇ ಗಾಯಗಳು ಸಾದಾ ಗಾಯಗಳು ಆಗಿರುತ್ತವೆ. ಈ ರೀತಿ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ನಿಪಿ. 6 ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 6 ಬಿ ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರಃ ವಕೀಲರಿಂದ: ಪಾಟೀ ಸವಾಲಿಗೆ ಕಾಲಾವಕಾಶ ಕೇಳಿರುತ್ತಾರೆ, ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ